# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 04-03-2021 ಪ್ರಶ್ನೆ ಸಂಖ್ಯೆ : 576 (680)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 04-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ವಾಣಿಜ್ಯ ಮಳಿಗೆ / ಅಂಗಡಿ ಮುಂಗಟ್ಟುಗಳ ಬಗ್ಗೆ

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಡೆತನದಲ್ಲಿರುವ ವಾಣಿಜ್ಯ ಮಳಿಗೆ/ಅಂಗಡಿ ಮುಂಗಟ್ಟುಗಳ ಸಂಖ್ಯೆ ಎಷ್ಟು; ಪ್ರತಿ ಮಳಿಗೆ/ಅಂಗಡಿಯ ಅಳತೆ ಎಷ್ಟು; ಅವು ಇರುವ ಪ್ರದೇಶ ಯಾವುವು; ಯಾರಿಗೆ ಯಾವ ಅವಧಿಗೆ ಲೀಸ್ ನೀಡಲಾಗಿದೆ; ಲೀಸ್ ಮುಗಿದಿದ್ದಲ್ಲಿ ಲೀಸ್ ಅವಧಿಯನ್ನು ಮುಂದುವರೆಸಲಾಗಿದೆಯೇ; ಇಲ್ಲವಾದಲ್ಲಿ ಖಾಲಿ ಮಾಡಿಸಲು ಪಾಲಿಕೆ ಕೈಗೊಂಡಿರುವ ಕ್ರಮಗಳೇನು; (ಪ್ರತಿ ಮಳಿಗೆ, ಅಂಗಡಿವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಯಾವ ಆಧಾರದ ಮೇಲೆ ಲೀಸ್ ನೀಡಲಾಗಿದೆ; ಹಾಗೂ ದರವನ್ನು ನಿಗಧಿಪಡಿಸುವಾಗ ಅನುಸರಿಸಿದ ಮಾನದಂಡಗಳೇನು; ಲೀಸ್ ಅವಧಿ ಮುಗಿದಿರುವ ಮಳಿಗೆ. ಅಂಗಡಿಗಳು ಯಾವುವು? (ವಿಳಾಸದೊಂದಿಗೆ ಸಂಪೂರ್ಣ ವಿವರ ನೀಡುವುದು)